
## ಫುಲ್ ಮೀಲ್ಸ್




ನಾನು ಎಂ.ಬಿ.ಬಿ.ಎಸ್. ಓದುತ್ತಿದ್ದ ಸಂದರ್ಭ. ನಾವು ಗೆಳೆಯರು ರಾಜ್ಯ ಮಟ್ಟದ ಅಂತರ ಕಾಲೇಜು ಕ್ರೀಡಾ ಸ್ಪರ್ಧೆಗಳಿಗಾಗಿ ಹುಬ್ಬಳ್ಳಿಯಿಂದ ಕಲಬುರ್ಗಿಗೆ ಬಂದಿದ್ದೆವು. ನನ್ನ ಗೆಳೆಯನೊಬ್ಬ ಅತಿಹೆಚ್ಚು ಊಟ ಮಾಡುತ್ತಿದ್ದ. ಕಷ್ಟ ಪಟ್ಟು ಫುಲ್ ಮೀಲ್ಸ್ ಕೊಡುವ ಹೋಟೆಲ್ ಪತ್ತೆ ಹಚ್ಚಿ ಮಧ್ಯಾಹ್ನ ಊಟ ಮಾಡಿ ಬಂದಿದ್ದ. 10 ಚಪಾತಿ, ಸಾಕಷ್ಟು ಅನ್ನ ಸಾರು, ಅನ್ನ ಮೊಸರು ಉಂಡಿದ್ದಾಗಿ ಹೇಳಿ ಅದೇ ದಿನ ರಾತ್ರಿ ನಮ್ಮನ್ನೆಲ್ಲ ಊಟಕ್ಕೆ ಅದೇ ಹೋಟೆಲ್ಲಿಗೆ ಕರೆದುಕೊಂಡು ಹೋದ. ಮಾಣಿಯನ್ನು ಕರೆದು ಎಲ್ಲರಿಗೂ ಫುಲ್ ಮೀಲ್ಸ್ ಕೊಡುವಂತೆ ಹೇಳಿದ. ಅವನು, ‘ಫುಲ್ ಮೀಲ್ಸ್ ಇಲ್ಲ; ಬರೀ ಪ್ಲೇಟ್ ಮೀಲ್ಸ್ ಇದೆ’ ಎಂದ. ಮ್ಯಾನೇಜರ್‌ನನ್ನು ಕರೆಸಿ, ‘ಮಧ್ಯಾಹ್ನವಷ್ಟೇ ಫುಲ್ ಮೀಲ್ಸ್ ತಗೊಂಡಿದ್ದೆ. ಈಗ ಫುಲ್ ಮೀಲ್ಸ್ ಇಲ್ಲ ಅಂತಿದ್ದಾನೆ’ ಎಂದು ಸಿಟ್ಟಿನಿಂದ ಕೇಳಿದ. ಅದಕ್ಕೆ ಮ್ಯಾನೇಜರ್, ‘ಹೌದು ಸಾರ್. ನೀವು ಯಾವಾಗ ಫುಲ್ ಮೀಲ್ಸ್ ಮಾಡಿ ಹೋದ್ರೋ ಆವಾಗಲೇ ಅದನ್ನು ಬಂದ್ ಮಾಡಿದ್ದೇವೆ" ಎಂದು ಉತ್ತರಿಸಿದ.

**ಡಾ. ರಂಗನಾಥ ಕಟ್ಟಿ**

## ಚಪ್ಪಲಿ ಚಿತ್ತರಾಗಬೇಡಿ



ಇತ್ತೀಚೆಗೆ ಕುಟುಂಬ ಸಮೇತರಾಗಿ ಬೀಗರ ಜೋತೆಗೆ ಉತ್ತರ ಕರ್ನಾಟಕ ಪ್ರವಾಸ ಕೈಗೊಂಡಿದ್ದೆವು. ಯೋಜನೆಯಂತೆ ಪ್ರಸಿದ್ಧ ದತ್ತಾತ್ರೆಯ ದೇಗುಲವಿರುವ ಗಾಣಿಗಾಪುರಕ್ಕೆ ಭೇಟಿ ನೀಡಿದೆವು. ದೇವರ ದರ್ಶನಕ್ಕೆ ಬಂದಾಗ ದೇವಸ್ಥಾನದ ಬಳಿ ಚಪ್ಪಲಿ ಬಿಡಲು ಎಲ್ಲೂ ವ್ಯವಸ್ಥೆ ಕಾಣಲಿಲ್ಲ. ಎಲ್ಲಿ ಚಪ್ಪಲಿ ಬಿಟ್ಟರೆ ಸುರಕ್ಷಿತ ಎಂದು ಎಲ್ಲರೂ ತಲೆ ಕೆಡಿಸಿಕೊಳ್ಳುತ್ತಿದ್ದೆವು. ವಿನೋದ ಪ್ರಿಯರಾದ ನಮ್ಮ ಬೀಗ ಸತ್ಯನಾರಾಯಣ ‘ಭಗವಂತನ ಸನ್ನಿಧಿಯಲ್ಲಿ ಚಪಲಚಿತ್ತನಾಗದೇ ಏಕೋ ಭಾವದಿ ಭಗವಂತನ ಭಜಿಸಿ ಮುಕ್ತಿಯ ಕಾಣೊ ಮನುಜ’ ಎಂಬ ನುಡಿವಾಣಿಗೆ ‘ಚಪ್ಪಲಿ ಚಿತ್ತನಾಗದೇ’ ಎಂದು ಸೇರಿಸಿ ಹೇಳಿದಾಗ ಎಲ್ಲರೂ ಚಪ್ಪಲಿ ಚಿಂತೆ ಮರೆತು ನಕ್ಕರು.

**ಬಿ.ಕೆ. ನರಸಿಂಹಮೂರ್ತಿ**